Phone:+91-80-22870060
Fax:+91-80-22875798
dmekarnataka@yahoo.com

ಕರ್ನಾಟಕ ಸರ್ಕಾರ

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

**DIRECTORATE OF MEDICAL EDUCATION**

**BMC&RI (Old Building), 1st Floor, Fort, K.R. Road, Bengaluru-560002.**

No. DME/NRC(2)/15 /2023-24

ದಿನಾಂಕ: 12-02-2024.

## ಸುತ್ತೋಲೆ

2023-24ನೇ ಸಾಲಿಗೆ ಶುಶ್ರೂಷಾ ಶಾಲೆ ಬದಲಾವಣೆಗೆ ಅರ್ಜಿ ಸಲ್ಲಿಸಲು ಬಯಸುವ ಶುಶ್ರೂಷಾ ವಿದ್ಯಾರ್ಥಿಗಳು ಹಾಗೂ ಸೇವಾನಿರತ ಶುಶ್ರೂಷಾಧಿಕಾರಿಗಳು ಪ್ರಥಮ ವರ್ಷದ ವಾರ್ಷಿಕ ಪರೀಕ್ಷೆಯ ಫಲಿತಾಂಶ ಬಂದ ನಂತರ ದಿನಾಂಕ: 12.02.2024. ರಿಂದ 22.02.2024 ರ ಒಳಗೆ ಈ ಕೆಳಕಂಡ ದಾಖಲೆಗಳೊಂದಿಗೆ ಈ ನಿರ್ದೇಶನಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು. ನಿಗಧಿ ಪಡಿಸಿರುವ ದಿನಾಂಕದ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ಸಲ್ಲಿಸ ಬೇಕಾದ ದಾಖಲೆಗಳು**

1. ವಿದ್ಯಾರ್ಥಿಯ ಮನವಿ ಪತ್ರ.
2. ಪ್ರಸ್ತುತ ಶಾಲೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು.
3. ವರ್ಗಾವಣೆಗೆ ಮಾಡಿಕೊಳ್ಳಲು ಬಯಸಿರುವ ಶಾಲೆಯಿಂದ ಸೀಟುಗಳು ಖಾಲಿ ಇರುವ ಬಗ್ಗೆ ಹಾಗೂ ನಿರಾಕ್ಷೇಪಣಾ ಪತ್ರ ಪಡೆಯುವುದು.
4. ಪರೀಕ್ಷೆಯಲ್ಲಿ ತೇರ್ಗಡೆಯಾದ ಅಂಕಪಟ್ಟಿಯ/ ಉತ್ತೀರ್ಣರಾದ ಕುರಿತು ಪ್ರತಿಯ ದೃಡೀಕೃತ ಪ್ರತಿ.
5. ಕೆಎಸ್‌ಡಿಎನ್‌ಇಬಿ ವತಿಯಿಂದ ನೀಡಲಾದ ಸೀಟು ಹಂಚಿಕೆ ಪತ್ರ.
6. ಸೇವಾನಿರತ ಶುಶ್ರೂಷಕರು ನಿಯೋಜನಾ ಆದೇಶ ಪ್ರತಿ.

**ಷರತ್ತುಗಳು:**

1. ಜಿಎನ್‌ಎಮ್ ಪ್ರಥಮ ವರ್ಷದ ಪರೀಕ್ಷೆಯಲ್ಲಿ ತೆಗೆದು ಕೊಂಡಿರುವ ಅಂಕಗಳ ಆಧಾರದ ಮೇಲೆ ವರ್ಗಾವಣೆ ನೀಡಲಾಗುವುದು.
2. ಖಾಲಿ ಇರುವ (ಸೇವಾನಿರತ/ಸಾಮಾನ್ಯ ಕೋಟಾ) ಸೀಟುಗಳಿಗೆ ಕೋಟಾನುಸಾರ ಪರಿಗಣಿಸಲಾಗುವುದು. ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಪರ್ಯಾಯ ಕೋಟಾಗೆ ಪರಿಗಣಿಸಲಾಗುವುದು.
3. ವರ್ಗಾವಣೆ ಆದೇಶ ವಿತರಿಸುವವರೆಗೂ ದ್ವಿತೀಯ ವರ್ಷದ ತರಗತಿಗೆ ಹಾಜರಾಗುತ್ತಿರಬೇಕು.
4. ಸರ್ಕಾರಿ ಕೋಟಾ ಸೀಟುಗಳಿಗೆ ಮಾತ್ರ ಆಯ್ಕೆಯಾಗಿರಬೇಕು.

ನಿರ್ದೇಶಕರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು

Director of Medical Education
Bengaluru.

Scanned with CamScanner